ಬೇರೆ ರಾಜ್ಯದ ವಿಚಾರ ನಮಗೆ ಏತಕ್ಕೆ ಎಂದು ನಾವು ಉಸಿರೆತ್ತಲಿಲ್ಲ. ನಾವು ಸುಮ್ಮನೆ ಕೂಳಿತಂ ಕೊಂಡಿಲ್ಲ. ನಮ್ಮಲ್ಲಿ ಆ ರೀತಿ ಇಲ್ಲ. ಬೇಕಾದರೆ ನಾವು ಸುಳ್ಳು ಬರೆಯಬಹುದು. ಅದು ಸರಿ ಯಾದುದಲ್ಲ. ಅದು ನಮ್ಮ ಕರ್ತವ್ಯವೂ ಅಲ್ಲ. ನಿಜ ಏನಿದೆ ಅದನ್ನು ತಮ್ಮ ಕಡೆ ಇಡುತ್ತಿದ್ದೇವೆ. If there is mistake. I will accept it. But as far as I know, our policemen have done their job during the last few years. They have done their jobs

ಕಳೆದ ಹತ್ತು ವರ್ಷದಿಂದ ಕ್ರೈಮ್ ಡಿಟೆಕ್ಷನ್ ಕಡೆಗೆ ಗಮನ ಇರಲಿಲ್ಲ. ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದರ ಕಡೆಗೆ ಗಮನ ಇತ್ತು. ಅವರು ಬಂದರು ಅವರಿಗೆ ಒಂದು ೫೦ ಜನ ಪೋಲೀಸರನ್ನು ಕಳುಹಿಸಿಕೊಡು, ಅಲ್ಲಿ ಕ್ರಿಕೆಟ್ ಮ್ಯಾಚ್, ಇಲ್ಲಿ ಫುಟ್‌ಬಾಲ್ ಮ್ಯಾಚ್, ಅಲ್ಲಿ ಜಗಳಆಯಿತು, ಇಲ್ಲಿ ಜಗಳ ಆಯಿತು, ಎಂದು ಎಲ್ಲಾ ಜನರನ್ನೂ (ಪೋಲೀಸರನ್ನು) ಇದರಲ್ಲೇ ತೊಡಗಿಸಿದ್ದರು. ಕ್ರೈಂ ಡಿಟೆಕ್ಷನ್ ಕಡೆಗೆ ಸರಿಯಾದ ಗಮನ ಇರಲಿಲ್ಲ. ಯಾರಾದರೂ ಕಳ್ಳತನ ಆಯಿತು ಎಂದು ಬಂದಾಗ ಕಂಪ್ಲೇಂಟ್ ಕೊಡಿ ಎಂದು ಕಂಪ್ಲೇಂಟ್ ತೆಗೆದುಕೊಂಡು ರಿಜಿಸ್ಟರ್ ಮಾಡಿಕೊಂಡು ಕಳುಹಿಸುತ್ತಿದ್ದರು. ಕ್ರೈಂ ಡಿಟೆಕ್ಷನ್ ನಾವು ಲಾಟ್ ಆಫ್ ಇಂಪಾರ್ಟೆನ್ಸ್ ಕೊಟ್ಟಿದ್ದೇವೆ. ಇಷ್ಟೊಂದು ಜನರನ್ನು ಹಿಡಿದಿದ್ದೇವೆ. ಬೇರೆ ರಾಜ್ಯಗಳವರನ್ನೂ ಹಿಡಿದಿದ್ದೇವೆ. We have done some good job. ಮಾನ್ಯ ಖರ್ಗೆಯವರು ಆಂಕಿ ಅಂಶಗಳನ್ನು ಕೊಡಿ ಎಂದರು. ಕಳೆದ ಹತ್ತುವರ್ಷಗಳದ್ದನ್ನು ಕೊಡಲೋ ಅಥವಾ ಒಂದು ವರ್ಷದ್ದು ಕೊಡಲೋ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಆಂಟಿ ಡಕಾಯಿತಿ ಸ್ಕ್ವಾಡ್ ಮಾಡಿದ್ದೀರಲ್ಲ. ಅದನ್ನು ಮಾಡಿದಮೇಲೆ ಅವರು ಎಷ್ಟು ಕೇಸಸ್ ಡಿಟೆಕ್ಟ್ ಮಾಡಿದ್ದಾರೆ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಇಲ್ಲಿಯವರೆಗೆ ಆಂಟಿ ಡಕಾಯಿಟಿ ಸ್ಕ್ವಾಡ ಡಿಸ್ಟ್ರಿಕ್ಟ್‌ನಲ್ಲಿ ಅವರವರೇಮಾಡಿಕೊಳ್ಳುತ್ತಿದ್ದರು. ಸ್ಟೇಟ್ ಲೇವಲ್‌ನಲ್ಲಿ ಆಂಟಿ ಡಕಾಯಿಟಿ ಸ್ಕ್ವಾಡ್ಸ್‌ಮಾಡಿ ಈಗತಾನೆ ಸರಕಾರ ಆರ್ಡರ್ ಮಾಡಿದೆ. ಅದಕ್ಕೆ ಆಫೀಸರ್ಸ್‌ನ್ನು ಇನ್ನು ನೇಮಕ ಮಾಡಿಲ್ಲ. ನಿನ್ನೆ ತಾನೆ ಆರ್ಡರ್ ಆಗಿದೆ. ಅದನ್ನು ಈಗ ಓಪನ್ ಮಾಡುತ್ತಿದ್ದೇವೆ. We are going to appoint them .In the absence of these anti-dacoity squads, we requested the Superintenden s of Police of the concerned districts to have anti-dacoity squads and have crime detection. They have done it.

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ವಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಮತ್ತು ತಾ॥ ೨೧-೩-೧೯೮೮ರ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ಹಿರಿಯೂರು ಪಟ್ಟಣಕ್ಕೆ ಸಾರ್ವಜನಿಕ ಆಸ್ಪತ್ರೆ

೪೮೨. ಶ್ರೀ ಆರ್. ರಾಮಯ್ಯ(ಹಿರಿಯೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಒಂದು ಸಾರ್ವಜನಿಕ ಆಸ್ಪತ್ರೆಯನ್ನು ಮಂಜೂರು ಮಾಡಲು ಸರ್ಕಾರದವರು ಅನುಸರಿಸುವ ನಿಯಮಗಳೇನು ?

ಆ) ನಿಯಮಗಳನ್ನು ಅನುಸರಿಸಿಯೇ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆಯೇ?

ಇ) ಹಿರಿಯೂರು ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ೪೮ ಹಾಸಿಗೆಯ ಸೌಲಭ್ಯ ವಿದ್ದರೂ, ಇಲ್ಲಿ ಸಾರ್ವತ್ರಿಕ ಆಸ್ಪತ್ರೆಯನ್ನು ಮಂಜೂರು ಮಾಡಲು ವಿಳಂಬವಾಗಿರುವುದಕ್ಕೆ ಕಾರಣ ಗಳೇನು ?